ಎಸ್.ಜಿ.ರಾಜಶೇಖರರೆಡ್ಡಿ, ಗೌರಿಬಿದನೂರು

ನಿಮ್ಮ ಅಭಿಪ್ರಾಯದ ಪ್ರಕಾರ ಮನುಷ್ಯರಲ್ಲಿ ಹೆಣ್ಣಿನ ಅಂಗಸೌಷ್ಠವ ಚೆನ್ನಾಗಿರುತ್ತದೋ, ಗಂಡಿನದೋ?



ರೂಪಮೆನೆ ಪೆಣ್ಣಿನ ರೂಪಂ; ಬಣ್ಣಿಪುದದಮಸದಳಂ. ಪೆಣ್ ಜಗದ ವೀಚಿಯ ಸುಸ್ವರೂಪಮಲ್ತೆ ಎಂದು ಕವಿಗಳೇ ಹೇಳಿದ್ದಾರಲ್ಲಾ!

ಎಂ.ಕೆ.ರಾಜೇಶ್, ಚಾಮರಾಜನಗರ

ಅಡಿಯಿಂದ ಮುಡಿಯವರೆಗೂ ಎಲ್ಲಾ ಮ್ಯಾಚಿಂಗ್ ಬೇಕೆನ್ನುವ ಹೆಣ್ಣು ಗಂಡನಿಗೆ ಸರಿಯಾಗಿ ಮ್ಯಾಚ್ ಆಗಲು ಪ್ರಯತ್ನಿಸುವುದಿಲ್ಲವೇಕೆ?

ಮ್ಯಾಚಿಂಗ್ ಬೇಕು ಎನ್ನುವವಳವಳು, ಆಗುವವಳಲ್ಲ; ಗಂಡನೇ ಮ್ಯಾಚ್ ಆಗಬೇಕಷ್ಟೆ!

ಕೆ.ಸಿ.ಸತ್ಯನಾರಾಯಣ, ದೊಡ್ಡಬಳ್ಳಾಪುರ

ನನಗೆ ರಕ್ತ ಕೊಡಿ. ನಾನು ನಿಮಗೆ ಸ್ವಾತಂತ್ರ್ಯ ಕೊಡಿಸುತ್ತೇನೆ ಎಂದರು ಸುಭಾಷ್ ಚಂದ್ರ ಬೋಸ್. ಈಗಿನ ನಾಯಕರು?



ಇವರೂ ರಕ್ತ ಕೇಳುತ್ತಾರೆ; ಖಾಸಗಿ ಬ್ಲಡ್ ಬ್ಯಾಂಕ್ ತೆರೆಯಲು!

ಡಿ.ಎಸ್.ಪಂಕಜಸುಬ್ರಮಣ್ಯ, ವಿಜಯನಗರ

ಮನುಷ್ಯನಿಗೆ ಹಸಿವೆ ಆಗದಂತೆ ಮಾಡಲು ಏನಾದರೂ ಕಂಡುಹಿಡಿದರೆ...?

ಇರಿ.. ಇರಿ.. ಹೊಟ್ಟೆ, ಕಾಮ, ಕೀರ್ತಿ, ಅಧಿಕಾರ, ಹೆಣ್ಣು, ಆಸ್ತಿ, ರೂಪ, ಯೌವನ, ಇವುಗಳಲ್ಲಿ ಯಾವ ಹಸಿವು ಆಗದಂತೆ?

ಹಾಡ್ಯ ಜಯಾನಂದ, ಮೈಸೂರು

ಮಾನ, ಮರ್ಯಾದೆ ಇಲ್ಲವಾ ಎನ್ನುತ್ತಾರಲ್ಲಾ, ಎರಡಕ್ಕೂ ಏನು ವ್ಯತ್ಯಾಸ, ಎಲ್ಲಿರುತ್ತದೆ?

ಆ ವಿಷಯವೇಕೆ ಬಿಡಿ; ಇದ್ದವರಿಗೆ ಗೊತ್ತು, ಇಲ್ಲದವರಿಗೆ ಹೇಳಿದರೂ ತಿಳಿಯದು.

ಜೆ.ಪ್ರದೀಪಕುಮಾರ, ಹೂವಿನಹಡಗಲಿ

ಮಕ್ಕಳಿಗೆ ದೇವರ, ಪೂರ್ವಜರ ಹೆಸರುಗಳ ನಾಮಕರಣ ಮಾಡುತ್ತಿಲ್ಲವಲ್ಲಾ, ಏಕೆ?

ದೇವತೆಗಳ, ಪೂರ್ವಜರ ಹೆಸರು ಕೆಡಿಸಬಾರದೆಂಬ ಸದುದ್ದೇಶ!

ದೇಶವಳ್ಳಿ ಶಿವು, ಚಾಮರಾಜನಗರ

ಕಾರ್ಖಾನೆಯಿಂದ ಬರುವ ಹೊಗೆಯಿಂದ ವಾಯು ಮಾಲಿನ್ಯ; ಪಕ್ಷದ ಭಿನ್ನಮತದಿಂದ ಬರುವ ಹೊಗೆಯಿಂದ...?

ಅದು ಹೊಗೆಯಲ್ಲ; ಭಿನ್ನದೇವತೆಗಳಿಗೆ ಅರ್ಪಿಸುವ ಹವಿಸ್ಸು!

ವಿದ್ಯಾ ಎನ್. ಪೈ, ಕಾಸರಗೋಡ

ಸಾಲ ಮಾಡಿ ತುಪ್ಪ ತಿನ್ನುವುದು ಯಾತಕ್ಕಾಗಿ?

ಬುದ್ಧಿ ಬೆಳೆಸಿಕೊಂಡು ಸಾಲಗಾರರಿಂದ ತಪ್ಪಿಸಿಕೊಳ್ಳಲು!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು

ಹೆಸರಿಗೆ ತಕ್ಕಂತೆ ನಮ್ಮ ನಡತೆ ಇರಬೇಕಾ?

ಸಾಧ್ಯವಿಲ್ಲ ಬಿಡಿ; ಹಾಗಿದ್ದಲ್ಲಿ ಚಕ್ರವರ್ತಿ ಎನ್ನುವವರು ಯಾವಾಗಲೂ ಚಕ್ರದಂತೆ ತಿರುಗುತ್ತಲೇ ಇರಬೇಕಾಗುತ್ತದೆ!

ನ.ಮುನಿಯಪ್ಪ, ಮಳ್ಳೂರು

ಅಣ್ಣತಂಗಿಯರದು ಹುಟ್ಟಿನಿಂದ ಅಂತ್ಯದವರೆಗಿನ ಪ್ರೇಮ, ಗಂಡ-ಹೆಂಡಿರದು ಮಧ್ಯದಿಂದ ಅಂತ್ಯದವರೆಗೂ ಇರುವ ಪ್ರೇಮ. ಸುಧಾ ವಾರಪತ್ರಿಕೆಯದು?

ವಾರ ವಾರಕ್ಕೂ ವೃದ್ಧಿಸುವ ಅನವರತ ರಸಭರಿತ ಪ್ರೇಮದ ಹೊಳೆ!

ಮಲ್ಲನಗೌಡ ಸಿ. ಪಾಟೀಲ, ಬಾಗಲಕೋಟೆ

ರಾಜಕಾರಣಿಗಳ ಹೆಚ್ಚು ಸಂಪತ್ತು ಹೊಟ್ಟೆಯಲ್ಲಿರುತ್ತದೋ, ಖಜಾನೆಯಲ್ಲೋ?

ಹೊಟ್ಟೆಯಲ್ಲೇ – ಸ್ವಿಸ್‌ಬ್ಯಾಂಕ್‌ನ ಹೊಟ್ಟೆಯಲ್ಲಿ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

ನಮ್ಮ ಪ್ರಶ್ನೆ ಬಹುಮಾನಿತ ಪ್ರಶ್ನೆ ಆಗಲು ನಿಮಗೇನು ಬಹುಮಾನ ಕೊಡಬೇಕು?

ತಲೆಗೆ ಕೆಲಸ ಕೊಡುವ ಅಥವಾ ಸಮಾಜಕ್ಕೆ ಅನುಕೂಲವಾಗುವ ಒಂದೇ ಪ್ರಶ್ನೆಯನ್ನು ಕಳಿಸಿದರೆ ಸಾಕು.

## ಬಹುಮಾನಿತ ಪ್ರಶ್ನೆ

ಎಂ.ಎಸ್.ಗುರುರಾಜಾಚಾರು ಬಳ್ಳಾರಿ

ಹೆಣ್ಣಿಗೂ, ಮೇಣದ ಬತ್ತಿಗೂ ಏನು ವ್ಯತ್ಯಾಸ?

ಮೇಣದ ಬತ್ತಿ ಹಚ್ಚಿದರೆ ಒಂದು ಕೋಣೆಯನ್ನು ಬೆಳಗೀತು; ಹೆಣ್ಣು ಕುಲಗಳನ್ನೇ ಬೆಳಗುತ್ತಾಳೆ.

ಬಸವರಾಜ ಹೊನಖಾಂಡೆ, ಅಥಣಿ

ಹಲೋ ಸರ್, ಗಾಯತ್ರಿ ಮಂತ್ರ ಗೊತ್ತು, ಅಭಿವೃದ್ಧಿ ಮಂತ್ರ ಎಂದರೇನು?

ಲಂಚದೇವರ ಪೂಜೆಗಾಗಿ ದೀಕ್ಷೆ ತೊಟ್ಟು, ತಮಗೇ ಮಂಗಳಾರತಿಯಾದರೂ ತಡೆದುಕೊಂಡು, ರಾಜಕಾರಣಿಗಳು ಜಪಿಸುವ ಮಂತ್ರ!

ಎಂ.ಎನ್.ಸೋಮಶೇಖರ್, ಮೈಸೂರು

ಕೋಪದಲ್ಲಿ ಒಳ್ಳೆಯ ಕೋಪ ಮತ್ತು ಕೆಟ್ಟ ಕೋಪ ಇರುತ್ತದೆಯೇ? ಹೇಗೆ?



ತಪ್ಪು ತಿದ್ದುವ ಶಿಕ್ಷಕನ ಕೋಪ ಒಳ್ಳೆಯ ಕೋಪ; ಧ್ವಂಸ ಮಾಡುವ ಉಗ್ರರ ಕೋಪ ಕೆಟ್ಟ ಕೋಪ!

ವಿ.ಹಮೀದ್, ವಿಟ್ಲ

ಜನರ ಸೇವೆ ಜನಾರ್ದನನ ಸೇವೆ; ಪತ್ನಿಯ ಸೇವೆ?

ಪತಿವರ್ಯ ತನ್ನನ್ನು ತಾನು saveಮಾಡಿಕೊಳ್ಳಲು ಮಾಡಲೇಬೇಕಾದ ಸೇವೆ!

ಸಿ. ಅನಂತರಾವ್ ಇಸಾಮುದ್ರ, ಭರಮಸಾಗರ

ಖಾಕಿ, ಕಾವಿ, ಖಾದಿ ಈ ಮೂರರ ಅರ್ಥವನ್ನು ಬಿಡಿಸಿ ಹೇಳಿ ಸಾರ್.

ಖಾತರಿಯಾದ(ನಂಬಬಲ್ಲ) ಕಿಂಕರಭಾವ, ಕಾವಿಲ್ಲದ ವಿಚಾರವಾದ, ಖಾಸಾ (ಸ್ವದೇಶಿ) ದಿರಿಸು ಆಗಿತ್ತು; ಖಾಲಿ ಕಿರಿಕಿರಿ, ಕಾಮ ವಿವಶತೆ, ಖಾಸಗಿ ದಿವಾನಗಿರಿ ಆಗಿವೆ!

ಎನ್.ನರಹರಿ, ಬೆಂಗಳೂರು

ಜೀವನದಲ್ಲಿ ನಾವೆಂದುಕೊಂಡಂತೆ ಎಲ್ಲವೂ ನಡೆದರೆ?

ಬದುಕು ಬಹಳ ಸಪ್ಪೆಯಾಗುತ್ತದೆ; ಅನಿಶ್ಚಿತತೆಯೇ ಜೀವನದ ರುಚಿ.

■ ರಾಮ್